ನಿರ್ದೇಶಕರ ಹೆಸರು : ಡಾ: ಲಲಿತ ಎಂ. ಮಹಾಲೆ

ಪ್ರಾಂಶುಪಾಲರ ಹೆಸರು : ಡಾ: ರಮಾನಾಥ್.ಟಿ.

ಸ್ವಾಯತ್ತ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ ಈ ಕೆಳಕಂಡವನ್ನು ಸರ್ಕಾರವು ನೇಮಿಸಿದೆ :

ಅಧ್ಯಕ್ಷರು : ವೈದ್ಯಕೀಯ ಶಿಕ್ಷಣ ಸಚಿವರು

ಸದಸ್ಯರು :

1. ಪ್ರಧಾನ ಕಾರ್ಯದರ್ಶಿ-1, ಕಾರ್ಯದರ್ಶಿ-2, ಆರ್ಥಿಕ ಇಲಾಖೆ
2. ಸ್ಥಳೀಯ ವಿಶ್ವವಿದ್ಯಾನಿಲಯದ ಉಪಕುಲಪತಿಗಳು
3. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯದರ್ಶಿಗಳು
4. ಸಮಾಜ ಕಲ್ಯಾಣ ಇಲಾಖಾ ಕಾರ್ಯದರ್ಶಿ
5. ನಿರ್ದೇಶಕರು, ವೈದ್ಯಕೀಯ ಶಿಕ್ಷಣ
6. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
7. ಇಬ್ಬರು ಫ್ಯಾಕಲ್ಟಿ ಸದಸ್ಯರು
8. ಒಬ್ಬರು ಅಥವಾ ಇಬ್ಬರು ವೈದ್ಯಕೀಯ ಕ್ಷೇತ್ರದಲ್ಲಿ ಹೆಸರಾಂತ ವೈದ್ಯರು.

ಸದಸ್ಯ ಕಾರ್ಯದರ್ಶಿ : ಸದರಿ ಸ್ವಾಯತ್ತ ಸಂಸ್ಥೆಯ ನಿರ್ದೇಶಕರು.

ತುಮಕೂರಿನಲ್ಲಿ ಸರ್ಕಾರದ ಸಮಾರಂಭಕ್ಕೆ ಹಣ ಸಂಗ್ರಹ.

2427-ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ 31-05-1996ರಂದು ತುಮಕೂರಿನ ಕಲಾ ಮಂದಿರದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯವರು ಏರ್ಪಾಟು ಮಾಡಿದ ಸಮಾರಂಭಕ್ಕೆ ಉಪನಿರ್ದೇಶಕರಾದ ಶ್ರೀ ದೊಡ್ಡಸಿದ್ದಪ್ಪನವರು ಖಾಸಗಿ ಶಾಲೆಗಳಿಂದ ತಲಾ ಒಂದೊಂದು ಸಾವಿರ ರೂಪಾಯಿಗಳಂತೆ ಹಣವನ್ನು ವಸೂಲು ಮಾಡಲು ಕೊಟ್ಟಿರುವ ಸುತ್ತೋಲೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ವಸೂಲಿ ಮಾಡಿರುವ ಹಣಕ್ಕೆ ಲೆಕ್ಕವಿಟ್ಟಿದೆಯೇ?

ಇ) ಈ ರೀತಿ ಹಣ ವಸೂಲಿ ಮಾಡಲು ಸರ್ಕಾರಿ ಅಧಿಕಾರಿಗೆ ಸರ್ಕಾರ ಅಧಿಕಾರ ಕೊಟ್ಟಿದೆಯೇ?

ಈ) ಇಂತಹ ಆಪಾದನೆ ಇದ್ದು ನೂರಾರು ಶಾಲೆಗಳಿಂದ ಹಣವನ್ನು ವಸೂಲಿ ಮಾಡಿದ್ದರೂ ಸಹ ಒಂದು ವರ್ಷವಾದರೂ ಅವರ ವಿರುದ್ಧ ಯಾವುದೇ

ರೀತಿಯ ಕ್ರಮಕೈಗೊಳ್ಳದೇ ಇರುವುದು ಏಕೆ? ಈ ಬಗ್ಗೆ ವಿವರವಾದ ವರದಿಯನ್ನು ಕೊಡುವುದು.

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಹೌದು. ಆದರೆ ಇದೊಂದು ಮನವಿಯಾಗಿದ್ದು ಸುತ್ತೋಲೆಯಾಗಿರುವುದಿಲ್ಲ.

ಆ) ಲೆಕ್ಕ ಇಟ್ಟಿರುತ್ತಾರೆ.

ಇ) ಇಲ್ಲ.

ಈ) ಪ್ರಶ್ನೆಯಲ್ಲಿ ಆಪಾದಿಸಿರುವಂತೆ ನೂರಾರು ಶಾಲೆಗಳಿಂದ ವಸೂಲಾತಿ ಮಾಡಿರುವುದಿಲ್ಲ. ಕೇವಲ ಮೂರು ಖಾಸಗಿ ಶಾಲೆಗಳವರು ತಲಾ ರೂ. 1000-00 ನಂತೆ ಸ್ವಪ್ರೇರಣೆಯಿಂದ ವಂತಿಕೆ ನೀಡಿರುವುದಾಗಿ ವರದಿಯಾಗಿದೆ. ಈ ಹಣ ಸದ್ಬಳಕೆಯಾಗಿರುವುದು ಮತ್ತು ದುರುಪಯೋಗವಾಗಿಲ್ಲದ ಮತ್ತು ಯಾವ ದುರುದ್ದೇಶದಿಂದಲೂ ಈ ಹಣವನ್ನು ಪಡೆದಿರುವುದಿಲ್ಲವೆಂದು ಮನವರಿಕೆಯಾಗಿದೆ. ಆದುದರಿಂದ ಸದರಿ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಅಗತ್ಯತೆ ಕಂಡು ಬಂದಿರುವುದಿಲ್ಲ.

ತುಮಕೂರು ಜಿಲ್ಲೆಯಲ್ಲಿ ಕಪ್ಪು ಹಲಗೆ ಯೋಜನೆಯಡಿ ಮಾಡಲಾದ ಖರ್ಚು.

895 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಪ್ಪುಹಲಗೆ ಯೋಜನೆಯಡಿ 8ನೇ (ಹಂತ) ಪಟ್ಟಿಯಲ್ಲಿ ತುಮಕೂರು ಜಿಲ್ಲೆಗೆ ಮಂಜೂರಾದ ಹಣವೆಷ್ಟು?

ಆ) ಯಾವ ಬಾಬ್ತಿಗಾಗಿ ಖರ್ಚು ಮಾಡಲಾಗಿದೆ? (ವಿವರ ಒದಗಿಸುವುದು)

ಇ) ಈ ಯೋಜನೆಯ ನಿಯಮಾವಳಿಗಳನ್ನು ಮುರಿದು ಉಪಕರಣಗಳನ್ನು ಕೊಂಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಬಗ್ಗೆ ವಿಚಾರಣೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ರೂ. 3,77,60,000.00

ಆ) ಪ್ರಸಕ್ತ ಭಂಡಾರದ ಪ್ರದೇಶಗಳಿಗೆ ರೂ. 30,72,355.00 ಖರ್ಚು ಮಾಡಲಾಗಿದೆ.

ಇ) ಇಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಪಿ.ಯು.ಸಿ. ವಿಜ್ಞಾನ ವಿಷಯದಲ್ಲಿ ಪಾಸು ಮಾಡಿರುವ ವಿದ್ಯಾರ್ಥಿಗಳಿಗೆ ಟಿ.ಸಿ.ಹೆಚ್. ದಾಖಲಾತಿಗೆ ಶೇಕಡ 50 ಕಡಿತ.

2428 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ.ಸಿ.ಹೆಚ್. ಪ್ರದೇಶದ ದಾಖಲಾತಿ ಬಗ್ಗೆ ಈ ವರ್ಷ ರಾಜ್ಯದಲ್ಲಿ ಬಂದಿರುವ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು. ರಾಜ್ಯದಲ್ಲಿರುವ ಸರ್ಕಾರಿ ವಲಯದ ವಿಜ್ಞಾನದ ವಿಷಯಕ್ಕೆ ಸಂಬಂಧಿಸಿದ ಒಟ್ಟು ಸೀಟುಗಳ ಸಂಖ್ಯೆ ಎಷ್ಟು?